ದಿನಾಂಕಃ23/02/2026 ಓ ಎಸ್.201/2024 ಡಿ ಡಬ್ಲೂ-01

**ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ಕೆ ಎನ್ ವಿ ವಕೀಲರಿಂದಃ**

1. ನಮ್ಮ ಮೂಲ ವಾಸ ಚಿತ್ರದುರ್ಗ. ನಾನು ಪಿಯು ಸಿ ತನಕ ಓದಿರುತ್ತೇನೆ.

ನನ್ನ ತಂದೆಗೆ 4 ಜನ ಮಕ್ಕಳು. ನನ್ನ ತಂದೆಗೆ ಆಸ್ತಿಗಳು ಬೆಳಗಟ್ಟದಲ್ಲಿ ಇದೆ. ಅವುಗಳನ್ನು 29 ವರ್ಷದ ಹಿಂದೆ ಪಾಲು ವಿಬಾಗ ಮಾಡಿಕೊಂಡಿದ್ದಾರೆ. ನನಗೆ ಅಕ್ಕ ತಂಗಿ ಇದ್ದಾರೆ. ನನ್ನ ಅಕ್ಕಂದಿರ 30 ವರ್ಷದ ಹಿಂದೆ ಆಗಿರುತ್ತದೆ. ವಿಬಾಗ ಮಾಡಿಕೊಂಡಾಗ ನನ್ನ ಅಕ್ಕಂದಿರನ್ನು ವಿಬಾಗದಲ್ಲಿ ಸೇರಿಸಿಕೊಂಡಿಲ್ಲ. ನನ್ನ ಅಕ್ಕಂದಿರ ಬಾಗಕ್ಕೆ ಆಸ್ತಿ ಕೊಟ್ಟಿರುತ್ತೇವೆ.

2. ನಾನು ದಾವಾ ಐಟಂ ನಂ.3 ಆಸ್ತಿಯಲ್ಲಿ ಮಾಲೀಕರು ಮತ್ತು ಸ್ವಾದೀನಾನುಬವದಲ್ಲಿ ಇದ್ದೇನ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಮೆಕ್ಕೆಜೋಳ ಬೆಳೆದಿರುತ್ತೇನೆ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಯಾವುದೇ ಹಕ್ಕು ಇಲ್ಲ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ವಾದಿ ಮತ್ತು ವಾದಿಯ ಹೆಂಡತಿ ನಮ್ಮ ಜಮೀನು ಹತ್ತಿರ ಬಂದು ಅಡ್ಡಿ ಆತಂಕ ಪಡಿಸಿರುತ್ತಾರೆ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯಲ್ಲಿ ಸ್ವಾದೀನದಲ್ಲಿ ಇರುವುದಿಲ್ಲ ಆದ್ದರಿಂದ ವಾದಿಯರು ನಮಗೆ ಅಡ್ಡಿ ಆತಂಕ ಪಡಿಸುವ ಪ್ರಮೇಯ ಬಂದಿಲ್ಲ ಎಂದರೆ ಸರಿಯಲ್ಲ.

3. ಓ ಎಸ್.585/2022 ದಾವಾದಲ್ಲಿ 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಹಾಜರಾಗದೇ ಆ ಕೇಸ್ ತೀರ್ಮಾನ ಆಗಿರುತ್ತದೆ ಎಂದರೆ ಹೌದು. ಹಿಂದೆ ಅಮಲ್ಜಾರಿ ಕೇಸ್ ಹಾಕಿದ ಬಗ್ಗೆ ಈ ಕೇಸಿನ ವಾದಿಯರಿಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸುಳ್ಳು. ಜನವರಿ 2024 ರಂದು 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ವಿನಾಕಾರಣ ತೊಂದರೆ ಕೊಟ್ಟು ಅಡ್ಡಿ ಆತಂಕ ಪಡಿಸಿದ್ದಾರೆ ಅಂತ ಹೇಳುವುದು ಸುಳ್ಳು ಎಂದರೆ ಸರಿಯಲ್ಲ ಕಾರಣ ನಮ್ಮ ಮನೆ ಹತ್ತಿರ ಎಲ್ಲ ಬಂದು ಅವರ ಬೆಂಬಲಿಗರನ್ನು ಕರೆದುಕೊಂಡು ಬಂದು ಗಲಾಟೆ ಮಾಡಿದ್ದಾರೆ. ಒಂದು ಸಾಕ್ಷಿ ಇರಲಿ ಅಂತ ನಾವು ಸುಳ್ಳು ದೂರು ಪೊಲೀಸ್ ಠಾಣೆಗೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ 1 ನೇ ಪ್ರತಿವಾದಿ ಪೋಲೀಸ್ ಠಾಣೆಗೆ ಹಾಜರಾಗಿರುತ್ತಾರೆ.

ಪೊಲೀಸರು ಸುಳ್ಳು ದೂರು ಅಂತ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ ಪೊಲೀಸರು ಸಿವಿಲ್ ವ್ಯಾಜ್ಯ ಇರುವುದರಿಂದ ನ್ಯಾಯಾಲಯಕ್ಕೆ ಹೋಗಿ ಬಗೆಹರಿಸಿಕೊಳ್ಳಿ ಅಂತ ಕಳುಹಿಸಿಕೊಟ್ಟಿದ್ದಾರೆ.

4. ಮೇ 2024 ನಮ್ಮ ಅನುಪಸ್ತಿತಿಯಲ್ಲಿ 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಐಟಂ ನಂ.3 ಆಸ್ತಿಯಲ್ಲಿ ಅಕ್ರಮವಾಗಿ ಸ್ವಾದೀನವನ್ನು ಹೊಂದಿದ್ದಾರೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಸ್ವಾದೀನದಲ್ಲಿ ಐಟಂ ನಂ.3 ಆಸ್ತಿ ಇತ್ತು ಅನ್ನುವುದು ಸುಳ್ಳು ಮತ್ತು 1 ನೇ ಪ್ರತಿವಾದಿ ಹಾಗೂ ಆತನ ಹೆಂಡತಿ ಅಡ್ಡಿ ಆತಂಕ ಪಡಿಸಿದ್ದಾರೆ ಅಂತ ಹೇಳಿದ ವಿಚಾರ ಕೂಡ ಸುಳ್ಳು ಎಂದರೆ ಸರಿಯಲ್ಲ. ನಂತರ ನಾವು ಹೋಗಿ ವಿಚಾರಿಸಿರುತ್ತೇವೆ 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ನಮಗೆ ಹೆದರಿಸಿರುತ್ತಾರೆ ಅಂತ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಕಾರಣಗಳು ಇಲ್ಲದೇ ಇದ್ದರೂ ಕೂಡ ಪುನಃ ಅವರ ವಿರುದ್ಧ ಓ ಎಸ್.152/2024 ಘೋಷಣಾತ್ಮಕ ಪರಿಹಾರ ಕೋರಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಹಾಕುವ ತನಕ ನಮ್ಮ ಮತ್ತು 1 ನೇ ಪ್ರತಿವಾದಿಯ ಕೇಸ್ ಪ್ರಕರಣಗಳ ವಿಚಾರವಾಗಿ ಯಾವುದೇ ವಿಚಾರ ವಾದಿಯರಿಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

5. ನಾನು ಕೋರ್ಟ್ ನಿಂದ ಬರೆಸಿಕೊಂಡ ಕ್ರಯಪತ್ರದ ಅಡಿಯಲ್ಲಿ ಐಟಂ ನಂ.3 ಆಸ್ತಿ ನನಗೆ ಸ್ವಾದೀನ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಕ್ರಯಪತ್ರದ ನಕಲು ಹಾಜರುಪಡಿಸಿರುತ್ತೇನೆ. ಆ ಕ್ರಯಪತ್ರ ನಿಡಿ.5 ಆಗಿರುತ್ತದೆ. ನಿಡಿ.5 ರಲ್ಲಿ ಸ್ವಾದೀನಕೊಟ್ಟಿರುವುದಾಗಿ ಬರೆದಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರ ಆಗುವ ಕಾಲಕ್ಕೆ ಆಸ್ತಿ 1 ನೇ ಪ್ರತಿವಾದಿಗೆ ಹೇಗೆ ಬಂದಿತು ಅನ್ನುವ ಬಗ್ಗೆ ದಾಖಲಾತಿ ಪರಿಶೀಲಿಸಿಲ್ಲ ಮತ್ತು ನೋಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಹೇಳುವುದೇನೆಂದರೆ ಅದು 1 ನೇ ಪ್ರತಿವಾದಿ ಬಾಗಕ್ಕೆ ಆಸ್ತಿ ಬಂದಿರುತ್ತದೆ ಎಂದು ಹೇಳುತ್ತಾರೆ. ಹಾಗಾದರೆ 1 ನೇ ಪ್ರತಿವಾದಿ ಮತ್ತು ಆತನ ತಂದೆ ಮತ್ತು ಆತನ ಸಹೋದರರ ಬಾಗದಲ್ಲಿ ಬಂದ ಆಸ್ತಿನಾ

ಎಂದರೆ ಹೌದು. 1 ನೇ ಪ್ರತಿವಾದಿಗೆ ಎಷ್ಟು ಜನ ಮಕ್ಕಳು ಮತ್ತು ಅವರ ವಾರಸುದಾರರು ಯಾರು ಅನ್ನುವ ಬಗ್ಗೆ ನಾನು ರೇಶನ್ ಕಾರ್ಡ ದಾಖಲೆ ನೋಡಿರುತ್ತೇನೆ. ಆಗ ವಾದಿಯರು 1 ನೇ ಪ್ರತಿವಾದಿಯ ಮಕ್ಕಳು ಅನ್ನುವ ವಿಷಯ ಗಮನಕ್ಕೆ ಬಂದಿತ್ತ ಎಂದರೆ ಹೌದು. ಅವರ ಹಕ್ಕು ಆಸಕ್ತಿ ಇರುವ ವಿಚಾರ ಕೂಡ ಗಮನಕ್ಕೆ ಬಂದಿತ್ತು ಎಂದರೆ ಇಲ್ಲ ಕಾರಣ ಅದು 1 ನೇ ಪ್ರತಿವಾದಿಯ ಆಸ್ತಿ ಮತ್ತು ವಾದಿಯರು 1 ನೇ ಪ್ರತಿವಾದಿಯ ಮಕ್ಕಳು. ಕರಾರಿನಲ್ಲಿ 1 ನೇ ಪ್ರತಿವಾದಿಯ ಮಕ್ಕಳ ಒಳಿತಿಗಾಗಿ ಮಾರಾಟ ಮಾಡುವ ಬಗ್ಗೆ ಒಕ್ಕಣಿಕೆ ಇಲ್ಲ ಎಂದರೆ ಸಂಬಂದಪಟ್ಟ ವಾರಸುದಾರರ ಕರೆದುಕೊಂಡು ಬಂದು ಮಾಡಿಕೊಡುತ್ತೇವೆ ಅಂತ ಬರೆದಿರುತ್ತದೆ ಎಂದು ಹೇಳುತ್ತಾರೆ. ನನ್ನ ಪ್ರಕಾರ ಮಕ್ಕಳು ವಾರಸುದಾರರಾ ಎಂದರೆ ಅದೆಲ್ಲ ನನಗೆ ಗೊತ್ತಿಲ್ಲ. ಹಾಗಾದರೆ ಒಕ್ಕಣಿಕೆ ಬರೆಯುವ ಸಮಯದಲ್ಲಿ ಯಾರ್ಯಾರು ವಾರಸುದಾರರು ಇದ್ದರು ಎಂದರೆ ಅದು ನನಗೆ ಗೊತ್ತಿಲ್ಲ. ದಾವಾ ಹಾಕುವ ಕಾಲಕ್ಕೆ 1 ನೇ ಪ್ರತಿವಾದಿಗೆ ಮಕ್ಕಳನು ಕರೆದುಕೊಂಡು ಬನ್ನಿ ಅಂತ ಕೇಳಿಕೊಂಡಿದ್ದೀರಾ ಎಂದರೆ ಆ ನ್ಯಾಯಾಲಯದಿಂದನೇ ನೋಟೀಸ್ ಹೋಗಿದೆ ಎಂದು ಹೇಳುತ್ತಾರೆ. ನಾನು ಹಾಕಿದ ನಿರ್ದಿಷ್ಟ ಪರಿಹಾರ ಕೇಸ್ ನಲ್ಲಿ ವಾದಿಯರು ಪಾರ್ಟಿ ಇರುವುದಿಲ್ಲ ಎಂದರೆ ಹೌದು. ಕರಾರು ಮಾಡಿಕೊಳ್ಳುವಾಗ ರೇಶನ್ ಕಾರ್ಡ ಯಾಕೆ ತರಿಸಿ ಪರಿಶೀಲನೆ ಮಾಡಿಲ್ಲ ಎಂದರೆ ಅವತ್ತು ಪಹಣಿ ಜೊತೆ ರೇಶನ್ ಕಾರ್ಡ ಕೊಟ್ಟಿದ್ದರು ಎಂದು ಹೇಳುತ್ತಾರೆ. ಆ ರೇಶನ್ ಕಾರ್ಡ ನಲ್ಲಿ ವಾದಿಯರ ಹೆಸರು ಇತ್ತ ಎಂದರೆ ಅದು ಅಸ್ಪಷ್ಟತೆ ಇತ್ತು ಮತ್ತು ಜರಾಕ್ಸ ಆಗಿತ್ತು ಎಂದುಹೇಳುತ್ತಾರೆ. ಮೂಲ ರೇಶನ್ ಕಾರ್ಡ ತರಿಸಿ ನೋಡಲು ತೊಂದರೆ ಇತ್ತ ಎಂದರೆ ರಿಜಿಸ್ಟ್ರೇಶನ್ ಮಾಡಿಸಿಕೊಡುವ ಕಾಲಕ್ಕೆ ಎಲ್ಲರು ಬಂದು ಮಾಡಿಕೊಡುತ್ತೇವೆ ಅಂತ ಹೇಳಿದ್ದರು. ದಾವಾ ಐಟಂ ನಂ.3 ರಲ್ಲಿ ವಾದಿಯರಿಗೆ ಪೂರ್ಣ ಹಕ್ಕು ಅದಿಕಾರ ಸ್ವಾದೀನ ಇದ್ದರೂ ಕೂಡ ದಾಖಲೆ ಪೂರ್ಣ ಪರಿಶೀಲನೆ ಮಾಡದೇ ಕರಾರು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಐಟಂ ನಂ.3 ಆಸ್ತಿ ಖರೀದಿ ಮಾಡಲು ನನಗೆ ಯಾವುದೇ ಅದಿಕಾರ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ವಾದಿಯರು ಜಂಟಿ ಸ್ವಾದೀನದಲ್ಲಿ ಆಸ್ತಿ ಇದ್ದರು ಎಂದರೆ ಸರಿಯಲ್ಲ ಬಾಗದ

ಪತ್ರ ಅವರೇ ಹಾಕಿದ್ದರು ಎಂದು ಹೇಳುತ್ತಾರೆ. ಈ ಆಸ್ತಿ 1ನೇ ಪ್ರತಿವಾದಿಯೇ ವಾದಿಯ ಪರವಾಗಿ ನೋಡಿಕೊಳ್ಳುತಿದ್ದರು ಎಂದರೆ ನನಗೆ ಗೊತ್ತಿಲ್ಲ. ಇದರಲ್ಲಿ ಬಂದಂತಹ ಖರ್ಚು ಮತ್ತು ಆದಾಯ ವಾದಿಯರಿಗೆ ಸಮಪಾಲು ಆಗಿ ಕೊಡುತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಹಾಕುವಕ್ಕಿಂತ ಮೊದಲು 2 ವರ್ಷದ ಹಿಂದೆ 1 ನೇ ಪ್ರತಿವಾದಿ ಮನೆಯಲ್ಲಿ ಬಿನ್ನಾಬಿಪ್ರಾಯ ಬಂದಿದ್ದವು ಎಂದರೆ ಸುಳ್ಳು. 1 ನೇ ಪ್ರತಿವಾದಿ ವಾದಿಯರುನ್ನು ಸರಿಯಾಗಿ ನೋಡಿಕೊಳ್ಳದೇ ಮನಸ್ತಾಪ ಬಂದಿತು ಎಂದರೆ ಸುಳ್ಳು. ಆ ಸಂದರ್ಬದಲ್ಲಿ 1 ನೇ ಪ್ರತಿವಾದಿ ಕೆಲ ಕಾಲದಿಂದ ಜೂಜಾಟ ಮತ್ತು ಕುಡಿತದ ಚಟಕ್ಕೆ ಬಲಿಯಾಗಿದ್ದ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರವಾಗಿ ವಾದಿಯರು ಮತ್ತು ಅವರ ತಾಯಿ ಬುದ್ದಿವಾದ ಹೇಳಿದರು ಅವರು ಕೇಳಲಿಲ್ಲ ಎಂದರೆ ಸುಳ್ಳು. ಅದಕ್ಕಾಗಿ ವಾದಿಯರು ಬಾಗ ನಮಗೆ ಕೊಟ್ಟುಬಿಡಿ 1 ನೇ ಪ್ರತಿವಾದಿ ಹತ್ತಿರ ಕೇಳಿದ್ದರು ಎಂದರೆ ಸುಳ್ಳು. ಆದರೆ ಅವರು ಯಾವುದೇ ವಿಚಾರ ಹೇಳದೇ ನಿರ್ಲಕ್ಷ ಮಾಡಿದರು ಎಂದರೆ ಸುಳ್ಳು. ಗಂಡ ಹೆಂಡತಿ ಇಬ್ಬರು ಸೇರಿ ಗಲಾಟೆ ಮಾಡಿದ್ದರು ಅಂತ ಹಿಂದೆ ಬಂದು ಕೇಸ್ ಹಾಕಿದ್ದೆ ಎಂದರೆ ಹೌದು. ಆಗ ಈ ಪ್ರಕರಣದ ವಿಚಾರ ತಾಯಿಯಿಂದ ವಾದಿಯರಿಗೆ ಗೊತ್ತಾಯಿತು ಎಂದರೆ ಸುಳ್ಳು. ಆಗ ಕರಾರು ಪತ್ರ ಮತ್ತು ಖರೀದಿ ಪತ್ರ ಬರೆದುಕೊಟ್ಟ ವಿಚಾರ ವಾದಿಯರ ತಾಯಿಗೆ ಗೊತ್ತಾಯಿತು ಎಂದರೆ ಸುಳ್ಳು. ಆಗ ವಾದಿಯರಿಗೆ ಈ ಆಸ್ತಿ ಬಾಗದಲ್ಲಿ ಇರುವುದಿಲ್ಲ ಅಂತ ಹೇಳಿರುತ್ತೇನೆ ಎಂದರೆ ಸುಳ್ಳು. 1 ನೇ ಪ್ರತಿವಾದಿ ಬರೆದುಕೊಟ್ಟ ಖರೀದಿ ಕರಾರು ಪತ್ರ ವಾದಿಯರ ಒಳಿತಿಗಾಗಿ ಮತ್ತು ಅಬಿವೃದ್ದಿಗಾಗಿ ಅಲ್ಲ ಎಂದರೆ ಸುಳ್ಳು. ಐಟಂ ನಂ.3 ಕಾನೂನು ಬಾಹಿರವಾಗಿ ನಿಯಮ ವಿರುದ್ದ ಕಂದಾಯ ದಾಖಲೆಗಳನ್ನು ವರ್ಗಾವಣೆ ಮಾಡಿಸಿಕೊಂಡಿದ್ದೇನೆ ಎಂದರೆ ಸುಳ್ಳು. ಕ್ರಯಪತ್ರದ 2 ವರ್ಷದಲ್ಲಿ ನನ್ನ ಹೆಸರಿಗೆ ದಾಖಲೆ ವರ್ಗಾವಣೆ ಆಗಿದೆ. ದಾವಾ ಸ್ವತ್ತಿನಲ್ಲಿ ವಾಸದ ಗುಡಿಸಲು ಇದೆ ಎಂದರೆ ಇಲ್ಲ. ಅದಕ್ಕೆ ನೀರಿನ ವ್ಯವಸ್ತೆ ಇದೆಯಾ ಎಂದರೆ ಅದು ಕುಷ್ಕಿ ಜಮೀನು ಎಂದು ಹೇಳುತ್ತಾರೆ. ವಾದಿಗೆ ಕಾನೂನು ರೀತಿ ಬಾಗದ ಹಕ್ಕು ಇದೆ ನನಗೆ ಯಾವುದೇ ರೀತಿ ಆಸ್ತಿಯಲ್ಲಿ ಹಕ್ಕು, ಸ್ವಾದೀನ, ಅದಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಈ ಸ್ವತ್ತಿನ ಸ್ವಾದೀನದಲ್ಲಿ ಇದ್ದ ಬಗ್ಗೆ ಯಾವುದೇ

ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**
**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**